**ಕೆಳಗಿನ ಚಿತ್ರವನ್ನು ಗಮನವಿಟ್ಟು ನೋಡಿ. ಇವರ ಮಧ್ಯೆ ನಡೆದಿರಬಹುದಾದ ಸಂಭಾಷಣೆಯನ್ನು ಬರೆಯಿರಿ.**



@KTBS NOT TO BE REPUBLISHED

**ಈ ಸಂಭಾಷಣೆಯನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (ಪಟ್ಟಣದ ರಾಮು ಹಾಗೂ ಹಳ್ಳಿಯ ಸುರೇಶ ಇವರಿಬ್ಬರ ನಡುವೆ ತೋಟದಲ್ಲಿ ನಡೆದ ಸಂಭಾಷಣೆ)**

ರಾಮು : ಏಯ್, ಸುರೇಶ, ಏನೋ ಇದು? ಎಲೆನೇ ಇಲ್ಲದ ಕರಿಬಳ್ಳಿ

ಸುರೇಶ : ಓ! ಚೆನ್ನಾಗಿ ಹೇಳಿದೆ ಬಿಡು, ನಾನು ಇಲ್ಲಿಯವರೆಗೂ ಹಂಗೆ ಯೋಚನೆ ಮಾಡಿಯೇ ಇರಲಿಲ್ಲ. ಹೌದು ಒಂಥರ ಬಳ್ಳಿ ಹಂಗೆ ಕಾಣ್ತದೆ ಅಲ್ವಾ. (ಇಬ್ಬರೂ ನಗುವರು, ರಾಮು ಕುತೂಹಲದಿಂದ ಗಮನಿಸುವನು)

ರಾಮು : ಅಲ್ಲಲ್ಲಿ ನೀರು ತೊಟ್ಟಿಕ್ತಾ ಇದ್ಯಲ್ಲೋ

ಸುರೇಶ : ಇದನ್ನು ಡ್ರಿಪ್ ನೀರಾವರಿ ಅಂತಾರ್ ಕಣೋ ರಾಮು

ರಾಮು : ಹಾಗಂದರೆ ಏನೋ?

ಸುರೇಶ : ಈಗ ನಮ್ಮ ತೋಟಕ್ಕೆಲ್ಲ ನೀರು ಹಾಯಿಸಬೇಕು ಅಂದರೆ ಎಷ್ಟು ದಿನ ಬೇಕು ಹೇಳು, ಕಡಿಮೆ ಅಂದ್ರುನೂ ಐದಾರು ದಿನಾನಾದ್ರೂ ಬೇಕಾಗುತ್ತದೆ. ಈಗ ಹಂಗಲ್ಲ ನೋಡು ಈ ಸಣ್ಣ ಸಣ್ಣ ಪೈಪುಗಳ ಮೂಲಕ ನೀರು ಹನಿಹನಿಯಾಗಿ ಮರದ ಬುಡಕ್ಕೆ ಯಾವಾಗಲೂ ಬೀಳ್ತಾ ಇರ್ತದೆ. ಅದಕ್ಕೇ ಮತ್ತೆ ಇದನ್ನು 'ಹನಿ ನೀರಾವರಿ' ಅಂತಾನು ಕರೆಯೋದು.

ರಾಮು : ನೀರು ಯಾವಾಗಲೂ ಬೀಳ್ತಾನೆ ಇರುತ್ತದಾ?

ಸುರೇಶ : ಹೌದು, ಇದರಿಂದ ಮರ ಗಿಡಗಳಿಗೆ ಸದಾ ನೀರು ದೊರೆಯೋದಲ್ದೆ, ಗಿಡದ ಬಳಿಯೇ ನೀರು ಹನಿ ಹನಿಯಾಗಿ ಸದಾ ಬೀಳುವುದರಿಂದ ಬೀಳುವ ನೀರೆಲ್ಲಾ ಗಿಡದ ಬೇರುಗಳಿಗೆ ನೇರವಾಗಿ ದೊರೆಯುತ್ತದೆ.

ರಾಮ : ಇದರಿಂದ ಕಳೆಗಳೂ ಕಡಿಮೆ ಇವೆ ಅಲ್ಲವೆ?

ಸುರೇಶ : ಹೌದು, ಮೊದಲು (ಸ್ಪ್ರಿಂಕ್ಲರ್) ತುಂತುರು ಪದ್ಧತಿಯಿಂದ ನೀರು ಹಾಯಿಸುತ್ತಿದ್ದೆವು. ನೀರು ಎಲ್ಲಾ ಕಡೆ ಬೀಳ್ತಿತ್ತು ಕಳೆನೂ ಜಾಸ್ತಿ ಇತ್ತು. ನೀರು ವ್ಯರ್ಥ ಆಗಿತ್ತು.

ರಾಮು : ನೀರನ್ನು ಈ ಕಾಲುವೆಯಿಂದ ನೇರವಾಗಿ ಹರಿಸಲೂಬಹುದು ಅಲ್ವಾ?

ಸುರೇಶ : ಸಾಕಷ್ಟು ನೀರು ಸಿಕ್ತಾ ಇಲ್ಲ. ಗಿಡಕ್ಕೆ ಅಗತ್ಯವಾದ ನೀರನ್ನು ವರ್ಷಪೂರ್ತಿ ಮಿತವಾಗಿ ಬಳಸಲು ಹನಿ ನೀರಾವರಿ ಪದ್ಧತಿ ಬಹಳ ಉತ್ತಮ.

ರಾಮು : ಸರಿ ಕಣೋ ಸುರೇಶ, ಎಷ್ಟೋ ಒಳ್ಳೆಯ ಪ್ರಯೋಗಾನೋ ಇದು. ಇದರಿಂದ ನೀರು ವ್ಯರ್ಥವಾಗಿ ಹಾಳಾಗ್ಲಿಕ್ಕೆ ಸಾಧ್ಯವೇ ಇಲ್ಲ ಬಿಡು. ನೀರು ಎಷ್ಟು ಅಮೂಲ್ಯ ಅನ್ನೋದನ್ನ ನಗರಕ್ಕೆ ಬಂದು ನೋಡಬೇಕು. ಕೆಲವು ಸಲ ವಾರಗಟ್ಟಲೆ ನೀರೇ ಬರೋದಿಲ್ಲ. ಒಂದೊಂದು ನಲ್ಲಿಯ ಹತ್ತಿರ ನೂರಾರು ಬಿಂದಿಗೆಗಳು ಸಾಲುಗಟ್ಟಿ ನಿಂತು ಬಿಡ್ತಾವೆ.

ಸದ್ಯ ನಿನ್ನ ಜೊತೆ ಬಂದು ಈ ಹನಿ ನೀರಾವರಿ ಬಗ್ಗೆ ತಿಳಿದು ಕೊಂಡ ಹಾಗೆ ಆಯಿತು. ನನ್ನ ಸ್ನೇಹಿತರಿಗೂ ಇದನ್ನು ತಿಳಿಸುತ್ತೇನೆ.

©KTBS NOT TO BE REPUBLISHED

**ಪ್ರಶ್ನೆಗಳು:**

1. ಅಲ್ಲಲ್ಲಿ ನೀರು ತೊಟ್ಟಿಕ್ತಾ ಇದ್ಯಲ್ಲೊ ಎಂದು ರಾಮು ಕೇಳಿದ ಪ್ರಶ್ನೆಗೆ ಸುರೇಶನ ಉತ್ತರವೇನು?

2. ನೀರು ಯಾವಾಗಲೂ ಬೀಳ್ತಾನೆ ಇರುತ್ತದಾ ಎಂದು ರಾಮು ಕೇಳಿದ ಪ್ರಶ್ನೆಗೆ ಸುರೇಶ ಏನೆಂದು ಉತ್ತರಿಸಿದನು?

@KTBS NOT TO BE REPUBLISHED

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ಕಥೆಗಳು/ಕವಿತೆಗಳನ್ನು ಮೌಖಿಕ/ಲಿಖಿತ ರೂಪದಲ್ಲಿ ಪ್ರಶಂಸಿಸುವೆನು | | | |
| 2. | ಸಂಭಾಷಣೆಗಳನ್ನು ಸೂಕ್ತ ಲೇಖನ ಚಿಹ್ನೆಗಳೊಂದಿಗೆ ಬರೆಯುವೆ | | | |
| 3. | ವಾಕ್ಯಗಳನ್ನು ಕರ್ತರಿ-ಕರ್ಮಣಿ ಪ್ರಯೋಗದಲ್ಲಿ ಬರೆಯುವೆ | | | |
| 4. | ಕನ್ನಡ ವ್ಯಾಕರಣದ ಸಾಂದರ್ಭಿಕ ನಿಯಮಗಳನ್ನು ಅರ್ಥೈಸಿಕೊಳ್ಳುವೆ | | | |

**ಶಿಕ್ಷಕರ ಅಭಿಪ್ರಾಯ:**

| ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

# 9. ಕಿರುಪರೀಕ್ಷೆ – 2

## I. ಬಿಟ್ಟ ಸ್ಥಳ ತುಂಬಿರಿ.

1. 'ಎಸೆಯಲಿ' ಪದದ ಕ್ರಿಯಾಪದ ರೂಪ ______________________
2. 'ಬಂದಾನು' ಕ್ರಿಯಾಪದವನ್ನು ವಿಧ್ಯರ್ಥಕ ರೂಪಕ್ಕೆ ಪರಿವರ್ತಿಸಿದಾಗ ಹೀಗೆ ಬದಲಾಗುವುದು ______________________
3. 'ಹೇಳುತ್ತಾರೆ' ಕ್ರಿಯಾಪದವು ಈ ಕಾಲದಲ್ಲಿದೆ ______________________
4. 'ನೋಡರು' ಪದವನ್ನು ವಿಧ್ಯರ್ಥಕಕ್ಕೆ ಪರಿವರ್ತಿಸಿದರೆ ______________________ ಆಗಿ ಬದಲಾಗುವುದು.
5. 'ಬರನು' ಪದದಲ್ಲಿರುವ ಅಖ್ಯಾತ ಪ್ರತ್ಯಯ ______________________

## II. ಹೊಂದಿಸಿ ಬರೆಯಿರಿ.

| | ಎ | | ಬಿ | ಉತ್ತರ |
|---|---|---|---|---|
| 1. | ಬರಲಿ | – | ಸಂಭಾವನಾರ್ಥಕ | ______ |
| 2. | ನೋಡಿಯಾರು | – | ನಿಷೇಧಾರ್ಥಕ | ______ |
| 3. | ಹೇಳರು | – | ವಿಧ್ಯರ್ಥಕ | ______ |
| 4. | ಬರುವೆನು | – | ಭೂತಕಾಲ | ______ |
| 5. | ಹಾಡಿದಳು | – | ಭವಿಷ್ಯತ್‌ಕಾಲ | ______ |

## III. ಕೆಳಗಿನ ವಾಕ್ಯವನ್ನು ಕರ್ಮಣಿರೂಪಕ್ಕೆ ಪರಿವರ್ತಿಸಿ.

1. ಸಂಕೇತನು ಮರವನ್ನು ಏರಿದನು.

______________________

2. ಜಾನ್ಸಿಯು ಹಾಡನ್ನು ಹಾಡಿದಳು.

______________________

3. ಬೆಕ್ಕು ಹಾಲನ್ನು ಕುಡಿಯಿತು.

______________________

4. ದಿನೇಶನು ಆಟವನ್ನು ಆಡಿದನು.

______________________

5. ಕವಿಯು ಕಾವ್ಯವನ್ನು ವಾಚಿಸಿದನು.

______________________

NOT TO BE REPUBLISHED @KTBS

**IV. ಕೆಳಗಿನ ವಾಕ್ಯಗಳನ್ನು ಕರ್ತರಿರೂಪಕ್ಕೆ ಪರಿವರ್ತಿಸಿ.**

1. ಜಿಂಕೆಯು ಹುಲಿಯಿಂದ ಬೇಟೆಯಾಡಲ್ಪಟ್ಟಿತು.

_______________

2. 'ಅಭಿಜ್ಞಾನ ಶಾಕುಂತಲ' ನಾಟಕವು ಕಾಳಿದಾಸನಿಂದ ಬರೆಯಲ್ಪಟ್ಟಿತು.

_______________

3. ಪುಸ್ತಕವು ರಾಜೇಶನಿಂದ ಓದಲ್ಪಟ್ಟಿತು.

_______________

4. ದೇವರು ಭಕ್ತರಿಂದ ಆರಾಧಿಸಲ್ಪಟ್ಟನು.

_______________

5. ಪದ್ಯವು ಕಮಲಳಿಂದ ವಾಚಿಸಲ್ಪಟ್ಟಿತು.

_______________

**V. ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

1. 'ಕಡಿದನು' ಕ್ರಿಯಾಪದವನ್ನು ನಿಷೇಧಾರ್ಥಕಕ್ಕೆ ಪರಿವರ್ತಿಸಿದಾಗ _______________

   (a) ಕಡಿಯಲಿ (b) ಕಡಿಯನು (c) ಕಡಿದಾನು (d) ಕಡಿಯುತ್ತಾನೆ

2. ಕಮಲಳು ಮಾಲೆಯನ್ನು **<u>ಕಟ್ಟಿದಳು</u>**. ಗೆರೆ, ಎಳೆದ ಕ್ರಿಯಾಪದವು ಈ ಕಾಲದಲ್ಲಿದೆ. _______________

   (a) ಭವಿಷ್ಯತ್ (b) ಭೂತ (c) ವರ್ತಮಾನ (d) ವಿಧ್ಯರ್ಥಕ

3. 'ನೋಡಿದೆನು' ಕ್ರಿಯಾಪದದಲ್ಲಿರುವ ಅಖ್ಯಾತ ಪ್ರತ್ಯಯ _______________

   (a) ಅನು (b) ಎನು (c) ಅದು (d) ಅಳು

4. 'ಹೇಳುತ್ತೇನೆ' ಕ್ರಿಯಾಪದವನ್ನು ವಿಧ್ಯರ್ಥಕ ರೂಪಕ್ಕೆ ಪರಿವರ್ತಿಸಿದಾಗ _______________

   (a) ಹೇಳಲಿ (b) ಹೇಳಿಯಾಳು (c) ಹೇಳೀತು (d) ಹೇಳುವನು

5. 'ಬರುವನು' ಕ್ರಿಯಾಪದವು ಈ ಕಾಲದಲ್ಲಿದೆ _______________

   (a) ಭೂತ (b) ವರ್ತಮಾನ (c) ಭವಿಷ್ಯತ್ (d) ವಿಧ್ಯರ್ಥಕ

© KTBS NOT TO BE REPUBLISHED

**VI. ಈ ಕಥೆಯನ್ನು ಓದಿಕೊಂಡು ಸಂಭಾಷಣೆ ರೂಪದಲ್ಲಿ ಬರೆದು ಶೀರ್ಷಿಕೆಯನ್ನು ನೀಡಿ.**

ಚಂದ್ರಗುಪ್ತ ಇತಿಹಾಸದ ಪ್ರಸಿದ್ಧ ಚಕ್ರವರ್ತಿ. ಆತನ ಪ್ರಧಾನಿ ಚಾಣಕ್ಯ. ಇಬ್ಬರೂ ಒಮ್ಮೆ ಜನರ ಕಷ್ಟ–ಸುಖ ಅರಿಯಲು ರಾತ್ರಿ ಹೊತ್ತು ವೇಷ ಬದಲಿಸಿ ಸಂಚಾರ ಹೊರಟರು. ಆಗ ಚಳಿಗಾಲದ ಸಮಯ, ಬಹಳ ಚಳಿಯಿತ್ತು. ಬೀದಿಯ ಬದಿಗಳಲ್ಲಿ ಬಹಳ ಬಡಜನ ಚಳಿಯಿಂದ ನಡುಗುತ್ತಾ ಮುದುಡಿ ಮಲಗಿದ್ದರು. ಇದನ್ನು ರಾಜ ನೋಡಿದನು. ಮನಸ್ಸಿನಲ್ಲೇ ಇವರಿಗೆಲ್ಲಾ ಕಂಬಳಿ ಕೊಡಬೇಕೆಂದು ತೀರ್ಮಾನಿಸಿದನು. ಚಾಣಕ್ಯನಿಗೆ "ಇವರಿಗೆಲ್ಲಾ ಕಂಬಳಿ ಕೊಡುವ ವ್ಯವಸ್ಥೆ ಆಗಬೇಕು" ಎಂದು ಹೇಳಿದನು. ರಾಜನ ಆದೇಶದಂತೆ, ಸಿದ್ಧವಾದ ಕಂಬಳಿಗಳನ್ನು ವಿತರಿಸಲಿಕ್ಕಾಗಿ ಚಾಣಕ್ಯನ ಮನೆಯಲ್ಲಿ ಇಡಲಾಯಿತು. ಕಳ್ಳರಿಗೆ ಈ ವಿಷಯ ತಿಳಿದು ಚಾಣಕ್ಯನ ಮನೆಗೆ ಕನ್ನ ಹಾಕಿದರು. ಮನೆಯಲ್ಲಿ ಕಂಬಳಿ ರಾಶಿಯೇ ಇದ್ದರೂ ಚಾಣಕ್ಯ ಮತ್ತು ಅವನ ತಾಯಿ ಅವನ್ನು ಹೊದೆಯದೆ ಚಳಿಯಲ್ಲಿ ಮುದುಡಿ ಹರಿದ ಕಂಬಳಿಯನ್ನು ಹೊದ್ದು ಮಲಗಿದ್ದರು. ಬಳಿಯಲ್ಲಿಯೇ ಇದ್ದ ಹೊಸ ಕಂಬಳಿ ಹೊದೆಯದೆ ಹಾಗೆ ಮಲಗಿದ್ದನ್ನು ಕಂಡು ಕಳ್ಳರು ಆಶ್ಚರ್ಯಪಟ್ಟರು. ತಾವು ಬಂದ ಉದ್ದೇಶವನ್ನೇ ಮರೆತು, ಕಂಬಳಿ ಇದ್ದರೂ ನಡುಗುತ್ತಾ ಮುದುಡಿ ಮಲಗಿದ್ದೇಕೆ ಎಂದು ತಿಳಿದುಕೊಳ್ಳಲು ಕಳ್ಳರ ಮುಖಂಡ ಚಾಣಕ್ಯನನ್ನು ಎಬ್ಬಿಸಿ "ಅಯ್ಯಾ, ನಿಮ್ಮ ಮನೆಯಲ್ಲಿ ಕಂಬಳಿ ರಾಶಿಯೇ ಇದ್ದರೂ ಹೀಗೇಕೆ ನಡುಗುತ್ತಾ ಮಲಗಿದ್ದೀರಿ?" ಎಂದು ಕೇಳಿದನು. ಚಾಣಕ್ಯನು ಉತ್ತರವಾಗಿ "ಅಯ್ಯಾ ಯಜಮಾನ, ಅವು ಬಡವರಿಗೆ ಹಂಚಲು ತಂದ ಕಂಬಳಿ. ಅವುಗಳಲ್ಲಿ ಒಂದೇ ಒಂದನ್ನು ಹೊದ್ದು ಮಲಗಿದರೂ ನಾನೂ ನಿಮ್ಮಂತೆಯೇ ಆಗಿ ಬಿಡುತ್ತೇನಲ್ಲ!" ಎಂದನು. ಕಳ್ಳರ ಗುಂಪಿನವರಿಗೆ ಏನೂ ಅರ್ಥವಾಗಲಿಲ್ಲ. ಆದರೆ ಕಳ್ಳರ ಮುಖಂಡ ಚಾಣಕ್ಯನಿಗೆ ನಮಿಸಿ "ಸ್ವಾಮಿ, ನೀವು ನಮ್ಮ ಕಣ್ಣು ತೆರೆಸಿದಿರಿ. ಇನ್ನು ಮುಂದೆ ನಾವು ಕಳ್ಳತನ ಮಾಡುವುದಿಲ್ಲ" ಎಂದು ಕಂಬಳಿಯನ್ನು ತೆಗೆದುಕೊಳ್ಳದೆ ತನ್ನವರೊಂದಿಗೆ ಹೊರಟು ಹೋದನು.

@KTBS NOT TO BE REPUBLISHED

**ಸಂಭಾಷಣಾ ರೂಪ :**

**ಶಿಕ್ಷಕರ ಅಭಿಪ್ರಾಯ:**

| ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

# 10. ಅಲಂಕಾರ

## ಉಪಮಾಲಂಕಾರ

**ಈ ಮಾದರಿಯನ್ನು ಗಮನಿಸುತ್ತೇನೆ:** ಸೀತೆಯ ಮುಖ ಕಮಲದಂತೆ ಅರಳಿದೆ.

- ಉಪಮೇಯ – ಸೀತೆಯ ಮುಖ
- ಉಪಮಾನ – ಕಮಲ
- ಉಪಮಾವಾಚಕ – ಅಂತೆ
- ಸಮಾನಧರ್ಮ – ಅರಳಿರುವುದು
- ಅಲಂಕಾರ – ಉಪಮಾಲಂಕಾರ
- ಸಮನ್ವಯ – ಇಲ್ಲಿ ಉಪಮೇಯವಾದ ಸೀತೆಯ ಮುಖವನ್ನು ಕಮಲ ಎಂಬ ಉಪಮಾನಕ್ಕೆ ಹೋಲಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

**ಮಾದರಿಯಂತೆ ಬರೆಯಿರಿ.**

- ಹೊಳೆದಂಡೆಯಲಿರುವ ಕರಕೀಯ ಕುಡಿಯಂಗ ಹಬ್ಬಲೆ ಅವರ ರಸಬಳ್ಳಿ
- ಉಪಮೇಯ – ____________________
- ಉಪಮಾನ – ____________________
- ಉಪಮಾವಾಚಕ – ____________________
- ಸಮಾನಧರ್ಮ – ____________________
- ಅಲಂಕಾರ – ____________________
- ಸಮನ್ವಯ – ____________________

@KTBS NOT TO BE REPUBLISHED

**ಈ ಅಲಂಕಾರಿಕ ವಾಕ್ಯಗಳನ್ನು ಗಮನಿಸಿ – ಉತ್ತರಿಸಿ.**

ಹಗ್ಗ ಹಾವಿನಂತೆ ಕಾಣುತ್ತಿದೆ.

ರಮೇಶನ ಹಲ್ಲುಗಳು ದಾಳಿಂಬೆಯ ಬೀಜದಂತಿದೆ.

ಹಗ್ಗ ಹೇಗೆ ಕಾಣಿಸುತ್ತಿದೆ? (          )

ರಮೇಶನ ಹಲ್ಲುಗಳು ಹೇಗೆ ಕಾಣಿಸುತ್ತಿವೆ? (          )

ಇಬ್ಬನಿಯು ಮುತ್ತಿನ ಹಾಗೆ ಹೊಳೆಯುತ್ತಿದೆ.

ಇಬ್ಬನಿಯನ್ನು ಯಾವುದಕ್ಕೆ ಹೋಲಿಸಲಾಗಿದೆ?

1. ಅವನು ______________________________ ಹಾಗೆ ಎತ್ತರವಾಗಿದ್ದಾನೆ.
2. ಮೋಡ ______________________________ ಹಾಗೆ ಕಾಣಿಸುತ್ತಿದೆ.
3. ಕಮಲೆಯು ______________________________ ಓಡುತ್ತಾಳೆ.
4. ಮಾಲಿನಿ ______________________________ ಯಂತೆ ಹಾಡುತ್ತಾಳೆ.
5. ರಂಗಣ್ಣನು ______________________________ ನಂತೆ ಮಲಗಿದ್ದಾನೆ.
6. ಕವಿತಾ ______________________________ ಅಂತೆ ಬೆಳ್ಳಗಿದ್ದಾಳೆ.
7. ಚಂದನಾ ______________________________ ದಂತೆ ನಡೆಯುತ್ತಾಳೆ.
8. ಮಹೇಶ ______________________________ ನಂತೆ ಈಜುತ್ತಾನೆ.

**ಮಾದರಿಯಂತೆ ಬರೆಯಿರಿ.**

ಹಗ್ಗ ಹಾವಿನಂತೆ ಕಾಣಿಸುತ್ತಿದೆ.
ಹಗ್ಗ ಹೇಗೆ ಕಾಣಿಸುತ್ತಿದೆ?
ಹಗ್ಗ ಹಾವಿನಂತೆ ಕಾಣಿಸುತ್ತಿದೆ.

1. ಕುಡಿಹುಬ್ಬು ಬೇವಿನ ಎಸಳಿನಂತೆ ಇದೆ.

   ಪ್ರಶ್ನೆ: ಕುಡಿ ಹುಬ್ಬು ಹೇಗೆ ಇದೆ?

   ______________________________

2. ರಂಗನು ಪಾದರಸದಂತೆ ಓಡಾಡುತ್ತಾನೆ.

   ಪ್ರಶ್ನೆ: ರಂಗನು ಹೇಗೆ ಓಡಾಡುತ್ತಾನೆ?

   ______________________________

3. ತಿಮ್ಮನು ಮಂಗನಂತೆ ಮರದಿಂದ ಮರಕ್ಕೆ ಜಿಗಿಯುತ್ತಾನೆ.

   ಪ್ರಶ್ನೆ: ತಿಮ್ಮನು ಹೇಗೆ ಜಿಗಿಯುತ್ತಾನೆ?

   ______________________________

4. ಪಿಂಕಿ ಮುದ್ದುಮುದ್ದಾಗಿ ಗಿಳಿಯಂತೆ ಮಾತನಾಡುತ್ತಾಳೆ.

   ಪ್ರಶ್ನೆ: ಪಿಂಕಿ ಹೇಗೆ ಮಾತನಾಡುತ್ತಾಳೆ?

   ______________________________

@KTBS NOT TO BE REPUBLISHED

**ಈ ಕೆಳಗಿನ ಮಾದರಿಗಳನ್ನು ಗಮನಿಸಿ.**

## ಚಟುವಟಿಕೆ – 1

**ಕೆಳಗೆ ಕೊಟ್ಟಿರುವ ಪದಗಳನ್ನು ಒಂದಕ್ಕೊಂದು ಹೋಲಿಸಿ ವಾಕ್ಯ ರಚಿಸಿ.**

| | |
|---|---|
| ಮುಖ–ಚಂದ್ರ | ಪಾದರಸ – ಚುರುಕು |
| | |
| | |
| | |
| ಹಲ್ಲುಗಳು – ದಾಳಿಂಬದ ಬೀಜಗಳು | ಹಾಲು – ಹಂಸ |
| | |
| | |
| ಕಣ್ಣು – ಗೋಲಿ | ಹೂ – ನಗೆ |
| | |
| | |

@KTBS NOT TO BE REPUBLISHED

## ಚಟುವಟಿಕೆ – 2

**ಕೆಳಗೆ ಕೊಟ್ಟಿರುವ ವಾಕ್ಯದಲ್ಲಿನ ವಸ್ತುಗಳ ಹೋಲಿಕೆ ಪರಸ್ಪರ ಪೂರಕವಾಗಿದೆಯೇ ಎಂದು ಗಮನಿಸಿ**

**ಸರಿ/ತಪ್ಪು ಗುರುತಿಸಿ.**

1. ಸಮುದ್ರದ ನೀರು ಆಕಾಶದ ನೀಲಿಯಂತಿದೆ. ☐
2. ಮಗುವಿನ ಮುಖವು ಚಂದ್ರನಂತೆ ಮನೋಹರವಾಗಿದೆ. ☐
3. ಅವಳ ಮುಖ ತಾವರೆಯಂತೆ ಮುದುಡಿ ಹೋಯಿತು. ☐
4. ಕತ್ತಲೆಯಲ್ಲಿ ನೋಡಿದ ಹಗ್ಗವು ಹಾವಿನಂತೆ ಗೋಚರಿಸಿತು. ☐

## ಚಟುವಟಿಕೆ – 3

**ಕೆಳಗೆ ಕೊಟ್ಟಿರುವ ವಾಕ್ಯದಲ್ಲಿನ ಉಪಮೇಯವನ್ನು ಗುರುತಿಸಿ.**

| ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ. |
|---|
| |

| ಅವಳ ಮುಖವೇ ಚಂದ್ರ. |
|---|
| |

| ಮನೆಯೇ ಧರ್ಮಾಶ್ರಮ, ಮನೆವಾಳ್ತೆಯೇ ಧರ್ಮ. |
|---|
| |

| ಕಾಯಕವೇ ಕೈಲಾಸ. |
|---|
| |

**ಕೆಳಗೆ ಕೊಟ್ಟಿರುವ ವಾಕ್ಯದಲ್ಲಿನ ಉಪಮಾನವನ್ನು ಗುರುತಿಸಿ.**

| ಆ ಹುಡುಗಿ ವಿದ್ಯೆಯಲ್ಲಿ ಸಾಕ್ಷಾತ್ ಸರಸ್ವತಿ. |
|---|
| |

| ತಾಯಿಯಂತೆ ಮಗಳು, ನೂಲಿನಂತೆ ಸೀರೆ. |
|---|
| |

| ಆ ಹುಡುಗಿಯ ಕರಗಳು ಕಮಲದಂತೆ ಶೋಭಿಸಿದವು. |
|---|
| |

| ಸರೋಜಿನಿ ನಾಯ್ಡು ಭಾರತದ ಕೋಗಿಲೆ. |
|---|
| |

@KTBS NOT TO BE REPUBLISHED

## ಚಟುವಟಿಕೆ – 4

**ಕೆಳಗೆ ಕೊಟ್ಟಿರುವ ವಾಕ್ಯದಲ್ಲಿನ ಅಲಂಕಾರವನ್ನು ಮಾದರಿಯಂತೆ ಹೆಸರಿಸಿ, ಸಮನ್ವಯಗೊಳಿಸಿ.**

ದಸರಾಕಾಲದ ಮೈಸೂರು ಇಂದ್ರನ ಅಮರಾವತಿಯಂತೆ ಝುಗಝುಗಿಸುತ್ತದೆ.

ಉಪಮೇಯ – ದಸರಾ ಕಾಲದ ಮೈಸೂರು

ಉಪಮಾನ – ಇಂದ್ರನ ಅಮರಾವತಿ

ಉಪಮಾವಾಚಕ – ಅಂತೆ

ಸಮಾನಧರ್ಮ – ಝುಗಝುಗಿಸು

1. ಪೀತಾಂಬರವನ್ನುಟ್ಟ ಶ್ರೀಕೃಷ್ಣನು ಕುಂದಣದಲ್ಲಿಟ್ಟ ರತ್ನದಂತೆ ಹೊಳೆಯುತ್ತಿದ್ದನು.

2. ಪೂರ್ವ ದಿಕ್ಕಿನಲ್ಲಿ ಉದಯಿಸಿದ ಸೂರ್ಯನು ಮುತ್ತೈದೆಯ ಹಣೆಯ ಕುಂಕುಮದಂತೆ ಶೋಭಿಸುತ್ತಿದ್ದನು.

3. ಅವಳ ಮುಖ ಚಂದ್ರನಂತಿದೆ.

4. ದೈವ ಮಂದಿರವನ್ನು ಭಕ್ತರು ಅಲಂಕರಿಸುವಂತೆ

@KTBS
NOT TO BE REPUBLISHED

## ಚಟುವಟಿಕೆ – 5

## ರೂಪಕಾಲಂಕಾರ

**ಕೆಳಗಿನ ವಾಕ್ಯಗಳಲ್ಲಿರುವ ಉಪಮಾನ ಮತ್ತು ಉಪಮೇಯಗಳನ್ನು ಗುರುತಿಸಿ ಬರೆಯಿರಿ.**

- ಆ ಮನುಷ್ಯ ನಿಜವಾಗಿ ದೇವರು.

  ಉಪಮೇಯ : ________________

  ಉಪಮಾನ : ________________

- ಈ ಶಾಲೆಗೆ ಆ ವಿದ್ಯಾರ್ಥಿಯೊಂದು ರತ್ನ.

  ಉಪಮೇಯ : ________________

  ಉಪಮಾನ : ________________

- ವಿದ್ವಾಂಸನಾದ ಆತನು ಸಾಕ್ಷಾತ್ ಸರಸ್ವತಿ.

  ಉಪಮೇಯ : ________________

  ಉಪಮಾನ : ________________

- ಕಮಲಳ ಹಲ್ಲುಗಳು ದಾಳಿಂಬೆಯ ಬೀಜಗಳು.

  ಉಪಮೇಯ : ________________

  ಉಪಮಾನ : ________________

ರೂಪಕಾಲಂಕಾರ ವ್ಯಾಖ್ಯೆ: ವರ್ಣಿಸುವ ವಸ್ತುವು ಇನ್ನೊಂದರಂತೆ ಇದೆ ಎಂದು ಹೇಳದೆ, ಎರಡೂ ವಸ್ತುಗಳು ಎಂದರೆ, ಉಪಮೇಯ ಉಪಮಾನಗಳೆರಡೂ ಒಂದೇ ಎಂದು ಭೇದವಿಲ್ಲದಂತೆ ಹೇಳುವುದು ಅಥವಾ ಅಭೇದ ಕಲ್ಪಿಸುವುದು ರೂಪಕಾಲಂಕಾರ.

**ಕೆಳಗಿನ ರೂಪಕಾಲಂಕಾರ ಉದಾಹರಣೆಯನ್ನು ಮಾದರಿಯಂತೆ ಬರೆಯಿರಿ.**

ಸೀತೆಯ ಮುಖಕಮಲ ಅರಳಿತು

ಉಪಮೇಯ : ಸೀತೆಯ ಮುಖ

ಉಪಮಾನ : ಕಮಲ

ಅಲಂಕಾರ : ರೂಪಕಾಲಂಕಾರ

ಸಮನ್ವಯ : ಉಪಮೇಯವಾದ ಸೀತೆಯ ಮುಖವನ್ನು ಉಪಮಾನವಾದ ಕಮಲಕ್ಕೆ ಅಭೇದವಾಗಿ ರೂಪಿಸಿದೆ. ಹಾಗಾಗಿ ಇದು ರೂಪಕಾಲಂಕಾರ.

- ರಾಜರತ್ನ ಛವಿವಡೆದೆಸೆದನು.

________________________________________

________________________________________

@KTBS NOT TO BE REPUBLISHED

- ಚರಣಾಂಬುಜ

- ವಿಷದ ಹೊಗೆ

@KTBS NOT TO BE REPUBLISHED

## ಚಟುವಟಿಕೆ–6

## ದೃಷ್ಟಾಂತಾಲಂಕಾರ

ಎರಡು ಬೇರೆ ಬೇರೆ ವಾಕ್ಯಗಳು ಅರ್ಥಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದು ದೃಷ್ಟಾಂತಾಲಂಕಾರವೆನಿಸುವುದು.

**ಉದಾ:** ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ.

**ಮೇಲಿನ ವಾಕ್ಯವನ್ನು ಆಧರಿಸಿ ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಪೂರ್ಣಗೊಳಿಸಿ.**

1. ತಾಯಿಗಿಂತ ಬಂಧುವಿಲ್ಲ; ______
2. ಊರು ಉಪಕಾರ ಅರಿಯದು; ______
3. ಅಟ್ಟ ಮೇಲೆ ಒಲೆ ಉರಿಯಿತು; ______
4. ಮಾತು ಆಡಿದರೆ ಹೋಯಿತು; ______

**ಅರ್ಥ ಸಾದೃಶ್ಯದಂತೆ ಹೊಂದಿಸಿ ಬರೆಯಿರಿ.**

| | | |
|---|---|---|
| 1. ಸಾವಿಲ್ಲದ ಮನೆ ಇಲ್ಲ | a. ಬೀಜದಂತೆ ವೃಕ್ಷ | ________ |
| 2. ನೂಲಿನಂತೆ ಸೀರೆ | b. ಮುಗ್ಗಿದ ಜೋಳ | ________ |
| 3. ಅಗ್ಗದ ಮಾಲು | c. ಕುತ್ತು ಜೀವ ಕೆಡಿಸಿತು | ________ |
| 4. ತುತ್ತು ತೂಕ ಕೆಡಿಸಿತು | d. ಸೋಲಿಲ್ಲದ ಮನುಷ್ಯನಿಲ್ಲ | ________ |

**ಕೆಳಗಿನ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

1. ________ ಚಮತ್ಕಾರದಿಂದ ಕಾವ್ಯದ ಸೊಬಗು ಹೆಚ್ಚುವಂತೆ ರಚಿಸಿದ್ದರೆ ಅಂಥವುಗಳನ್ನು ಶಬ್ದಾಲಂಕಾರಗಳೆಂದು ಕರೆಯುವರು.

   (a) ಮಾತು (b) ಶಬ್ದ

   (c) ಅರ್ಥ (d) ವಾಕ್ಯ

2. ಅರ್ಥಚಮತ್ಕಾರದಿಂದ ಕಾವ್ಯದ ಸೊಬಗು ಹೆಚ್ಚುವಂತೆ ರಚಿಸಿದ್ದರೆ ಅಂಥವುಗಳನ್ನು ಹೀಗೆ ಕರೆಯುವರು.

   (a) ಶಬ್ದಾಲಂಕಾರ (b) ಉಪಮಾಲಂಕಾರ

   (c) ಅರ್ಥಾಲಂಕಾರ (d) ಯಮಕಾಲಂಕಾರ

3. ಅಲಂಕಾರದಲ್ಲಿ ವರ್ಣನೆಗೆ ಒಳಪಡುವ ವಸ್ತು / ವಿಷಯವನ್ನು ಹೀಗೆ ಕರೆಯುತ್ತಾರೆ.

   (a) ಉಪಮಾನ (b) ಉಪಮೇಯ

   (c) ಉಪಮಾವಾಚಕ (d) ಸಮಾನಧರ್ಮ

4. ವರ್ಣ್ಯ ಮತ್ತು ಅವರ್ಣ್ಯಗಳಿಗೆ ಬಿಂಬ ಪ್ರತಿಬಿಂಬ ಭಾವವು ವ್ಯಕ್ತವಾಗುತ್ತಿದ್ದರೆ ________ ಅಲಂಕಾರವೆನಿಸುವುದು.

   (a) ಉಪಮಾ (b) ರೂಪಕ

   (c) ದೃಷ್ಟಾಂತ (d) ಅರ್ಥಾಂತರನ್ಯಾಸ

5. ಉಪಮೇಯ ಉಪಮಾನ ವಸ್ತುಗಳು ಒಂದರಂತೆ ಇನ್ನೊಂದಿದೆ ಎಂದು ಹೇಳಿವೆ. ಒಂದು ಮತ್ತೊಂದು ಆಗಿದೆ ಎಂದು ಹೇಳುವುದು............................ಅಲಂಕಾರ ಎನಿಸುವುದು.

   (a) ಉಪಮಾ (b) ದೃಷ್ಟಾಂತ

   (c) ಅರ್ಥಾಂತರನ್ಯಾಸ (d) ರೂಪಕ

@KTBS NOT TO BE REPUBLISHED

# 11. ಛಂದಸ್ಸು

'ಕಾವ್ಯದ, (ಪದ್ಯದ) ಸೊಗಸನ್ನು ಹೆಚ್ಚಿಸಲು ಪದ್ಯ ರಚನೆಯಲ್ಲಿ, ಕವಿಗಳು ಬಳಸುವ ಪದ್ಯರಚನಾ ವಿಧಾನವೇ ಛಂದಸ್ಸು'.

'ಛಂದ' ಎಂದರೆ 'ಅಂದ' ಎಂದರ್ಥ. ಪದ್ಯ(ಕಾವ್ಯ)ವನ್ನು ಹಾಡಲು ಅಥವಾ ಗಮಕಿಯಂತೆ ವಾಚಿಸಲು ಈ ಛಂದಸ್ಸು, ಅತ್ಯಂತ ಸಹಕಾರಿ.

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲು 'A, B, C, D' ಆಯ್ಕೆಗಳ ಸಹಾಯ ಪಡೆಯಿರಿ

1. ಒಂದು ಕ್ಷಣ (ಮಾತ್ರೆ) ಕಾಲದಲ್ಲಿ ಹೇಳುವ ಅಕ್ಷರಗಳನ್ನು ಹೀಗೆಂದು ಗುರುತಿಸುತ್ತೇವೆ. ________

   A. ಗುರು  B. ಲಘು  C. ಪ್ರಾಸ  D. ಗಣ

2. ಒಂದು ಕ್ಷಣದಲ್ಲಿ ಹೇಳುವ ಅಕ್ಷರಗಳನ್ನು ಛಂದಸ್ಸಿನಲ್ಲಿ ಗುರುತಿಸುವ ಚಿಹ್ನೆ ಇದು. ________

   A. –  B. +  C. U  D. X

3. ಛಂದಸ್ಸಿನಲ್ಲಿ ಕಾಲವನ್ನು ಹೇಳುವ ಪದ ಇದು. ________

   A. ಮಾತ್ರೆ  B. ಗಣ  C. ಗುರು  D. ಲಘು

4. ಎರಡು ಮಾತ್ರಾ ಕಾಲದಲ್ಲಿ ಹೇಳಬೇಕಾದ ಅಕ್ಷರಗಳನ್ನು ಈ ಚಿಹ್ನೆಯಿಂದ ಗುರುತಿಸುತ್ತೇವೆ. ________

   A. U  B. –  C. X  D. +

5. 'ವಸ್ತ್ರದ' ಈ ಪದದಲ್ಲಿ – ಚಿಹ್ನೆ ಹಾಕಬೇಕಾದ ಅಕ್ಷರ ಇದು. ________ .

   A. ವ  B. ವಸ್ತ್ರ  C. ದ  D. ಸ್ತ್ರ

6. 'ಗತ್ಯಂತರ' ಈ ಪದಕ್ಕೆ ಲಘು–ಗುರು ಹಾಕುವ ರೀತಿ ಇದಾಗಿದೆ. ________ .

   A. – – U U  B. U – – –  C. – U – U  D. – – U U

7. 'ಮುಟ್ಟದಿರ್ಕೆ' ಈ ಪದಕ್ಕೆ ಪ್ರಸ್ತಾರ ಹಾಕಿರುವ ಸರಿಯಾದಕ್ರಮ ಇದು.

   A. ಮುಟ್ಟದಿರ್ಕೆ (– – – –)  B. ಮುಟ್ಟದಿರ್ಕೆ (– – U –)  C. ಮುಟ್ಟದಿರ್ಕೆ (U – – U)  D. ಮುಟ್ಟದಿರ್ಕೆ (– U – U)

8. ನಾಲ್ಕು ಸಾಲುಗಳಿರುವ ಪದ್ಯವನ್ನು ಕರೆಯುವ ರೀತಿ ಇದು ________ .

   A. ಷಟ್ಪದಿ  B. ಕಂದ  C. ರಗಳೆ  D. ಸಾಂಗತ್ಯ

9. 'ಆರು' ಸಾಲಿನ ಪದ್ಯಭಾಗವನ್ನು ಹೀಗೆಂದು ಕರೆಯುತ್ತೇವೆ. ________ .

   A. ಕಂದ  B. ರಗಳೆ  C. ಸುನೀತ  D. ಷಟ್ಪದಿ

@KTBS NOT TO BE REPUBLISHED

10. 'ಷಟ್ಪದಿ' ಪದದ ಅರ್ಥ ಇದಾಗಿದೆ. ______________ .

A. ನಾಲ್ಕು ಸಾಲಿನ ಪದ್ಯ B. ಆರು ಸಾಲಿನ ಪದ್ಯ

C. ಹತ್ತು ಸಾಲಿನ ಪದ್ಯ D. ಮೂರು ಸಾಲಿನ ಪದ್ಯ

11. ಅಕ್ಷರ ಅಥವಾ ಮಾತ್ರೆಗಳನ್ನು ಗುಂಪು ಮಾಡುವುದಕ್ಕೆ ಹೀಗೆನ್ನುತ್ತೇವೆ. ______________ .

A. ಗಣ ವಿಭಾಗ B. ಮಾತ್ರೆ ವಿಭಾಗ

C. ಯಾತ್ರಾ ವಿಭಾಗ D. ಯಾವುದೂ ಅಲ್ಲ

12. 'ಷಟ್ಪದಿ' ಛಂದಸ್ಸಿನ ಬಗೆಗಳಿಷ್ಟು ______________ .

A. ಐದು ಬಗೆ B. ನಾಲ್ಕು ಬಗೆ

C. ಆರು ಬಗೆ D. ಮೂರು ಬಗೆ

13. ಕಂದ ಪದ್ಯದಲ್ಲಿ ಸಮವಾಗಿರುವ ಸಾಲುಗಳಿವು ______________ .

A. ಒಂದು – ಎರಡನೆಯ ಸಾಲು B. ಎರಡು–ಮೂರನೆಯ ಸಾಲು

C. ಒಂದು–ಮೂರನೆಯ ಸಾಲು D. ಎಲ್ಲ ಸಾಲು

14. 'ಷಟ್ಪದಿ' ಪದ್ಯದಲ್ಲಿ ಸಮವಾಗಿರುವ ಸಾಲುಗಳಿವು ______________ .

A. 1,2,3–4 B. 1,2–4,5 C. 3,4–5,6 D. 3,4–5,6

15. ಸಾಲುಗಳ ಮಿತಿ ಇಲ್ಲದ ಪದ್ಯ ಛಂದಸ್ಸು ಇದು ______________ .

A. ಕಂದ B. ಷಟ್ಪದಿ C. ರಗಳೆ D. ಖ್ಯಾತ ಕರ್ನಾಟಕ

16. ಅಕ್ಷರಗಳನ್ನು ಎಣಿಸಿ ಗುಂಪು (ಗಣ) ಮಾಡುವ ಛಂದಸ್ಸು ಇದು. ______________ .

A. ಮಾತ್ರಾ ಛಂದಸ್ಸು B. ಅಕ್ಷರ ಛಂದಸ್ಸು

C. ಸಾಂಗತ್ಯ D. ಅಕ್ಕರ ಛಂದಸ್ಸು

17. 'ಸಲಗಂ' ಈ ಗಣದ ಹೆಸರು ______________ .

A. 'ಯ' ಗಣ B. 'ಜ' ಗಣ C. 'ಸ'ಗಣ D. 'ನ' ಗಣ

18. – U U ಇದು ______________ ಗಣ

A. ನಗಣ B. ರಗಣ C. ಭಗಣ D. ಜಗಣ

@KTBS NOT TO BE REPUBLISHED

# ಕಂದಪದ್ಯ

ಕೆಳಗಿನ ಅಕ್ಷರಗಳಿಗೆ ಪ್ರಸ್ತಾರ ಹಾಕಿರುವುದನ್ನು ಗಮನಿಸಿ.

U ಈ ಚಿಹ್ನೆಯನ್ನು ಲಘು ಎನ್ನುತ್ತೇವೆ.

ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷರಗಳನ್ನು ಲಘು ಎನ್ನುತ್ತೇವೆ.

| U | U | U | U | U | U |
|---|---|---|---|---|---|
| ಅ | ಇ | ಉ | ಋ | ಎ | ಒ |

| U | U | U | U | U | U |
|---|---|---|---|---|---|
| ಕ | ಕಿ | ಕು | ಕೃ | ಕೆ | ಕೊ |

**ಈ ಕೆಳಗೆ ನೀಡಿರುವ ಪದಗಳಿಗೆ ಪ್ರಸ್ತಾರ ಹಾಕಿರಿ**

ಸರಳ ಕರಡಿ ಸಹಜ ಅಮೃತ ಅಮರ

ವಿರಳ ಕಳಸ ವಿಷಯ ಸಮರ ತವರ

ಮಹಡಿ ಕುಸುಮ ಕೃತಕ ಭರತ ಗಣಿತ

(–) ಈ ಚಿಹ್ನೆಯನ್ನು 'ಗುರು' ಎನ್ನುತ್ತೇವೆ.

ಎರಡು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷರಗಳನ್ನು ಗುರು ಎನ್ನುತ್ತೇವೆ.

| – | – | – | – | – | – | – |
|---|---|---|---|---|---|---|
| ಆ | ಈ | ಊ | ಏ | ಐ | ಓ | ಔ |

| – | – | – | – | – | – |
|---|---|---|---|---|---|
| ಅಂ | ಗಂ | ಚಂ | ಜುಂ | ಕಃ | ಸಃ |

| – | – | – | – | – | – | – |
|---|---|---|---|---|---|---|
| ಕಾ | ಕೀ | ಕೂ | ಕೇ | ಕೈ | ಕೋ | ಕೌ |

| — | — | — | – U | – U | – U |
|---|---|---|---|---|---|
| ಮಣ್ | ಕಂ | ಕಲ್ | ಭತ್ತ | ಮಣ್ಣು | ಲಡ್ಡು |

@KTBS NOT TO BE REPUBLISHED

**ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಂಗಡಿಸಿ ಬರೆಯಿರಿ.**

ವಾರ್ಧಕ ಷಟ್ಪದಿ

ಅನುನಯದೊಳೆಲ್ಲವಂ ಕೊಡಬಹುದು ಬಿಡಬಹುದು

ಜನನಿಯಂ ಜನಕನಂ ನಲ್ಲಳಂ ದೈವವಂ

ಮನವಾರೆ ನಂಬಿ ನಚ್ಚಿರ್ದ ಪರಿವಾರಮಂ ಕೊಡುವ ಬಿಡುವತಿಕಲಿಗಳು

@KTBS NOT TO BE REPUBLISHED

## ಭಾಮಿನಿ ಷಟ್ಪದಿ

**ಮಾದರಿ: ಉದಾ:**

| | | | |
|---|---|---|---|
| 3 | 4 | 3 | 4 |
| UUU | UU– | – U | UU– |
| ವರದೆ | ವರಕಾ | ವೇರಿ | ನದಿಯಿಂ |

| | | | |
|---|---|---|---|
| 3 | 4 | 3 | 4 |
| UUU | – – | UUU | – UU |
| ಪರಮ | ಗೋದಾ | ವರಿಯ | ಮಧ್ಯದ |

| | | | | | |
|---|---|---|---|---|---|
| 3 | 4 | 3 | 4 | 3 | 4 2 |
| UUU | –UU | – U | –UU | –U | UU – – |
| ಹರಹು | ಕನ್ನಡ | ದೇಶ | ವೆಂದನು | ಚಕ್ರಿ | ನೃಪತುಂಗ |

**ಮಾದರಿಯಂತೆ ಈ ಪದ್ಯಕ್ಕೆ ಪ್ರಸ್ತಾರ ಹಾಕಿ**

ಕನ್ನಡವು ಹಿರಿದೊಂದು ಸಂಸ್ಕೃತಿ

ಕನ್ನಡವು ಹಿರಿದೊಂದು ಜ್ಞಾನವು

ಕನ್ನಡದ ಕಸ್ತೂರಿ ಸೌರಭ ಲೋಕ ತುಂಬಿಹುದು

ಕನ್ನಡದ ನುಡಿ ಕಿವಿಗೆ ಮಧುರವು

ಕನ್ನಡದ ನುಡಿ ಮಧುರ ಜೇನುವು

ಕನ್ನಡದ ಸಿರಿ ಸೊಬಗ ವರ್ಣಿಪರಾರು ಲೋಕದಲಿ

@KTBS
NOT TO BE REPUBLISHED

**ನೀವೇ ಮಾಡಿ:**

ಗುರುವಿಂದು ಬೆಸಸೆ ಭಿಕ್ಷೆಗೆ

ಬರುತಿರೆ ಪಿಡಿತಂದರೆಮ್ಮನಾ ದೆಸೆಗೆ ಭಯಂ

ಪುರುಳಿಲ್ಲ ನಿನ್ನ ಕೇಡಂ

ಪರಿವೀಕ್ಷಿಸಿ ಕರುಣದಿಂದೆ ತಲ್ಲಣಿಸಿದಪೆಂ

# 12. ನುಡಿ ಚಿತ್ರ

1. ನಿಮ್ಮ ಅಭಿವ್ಯಕ್ತಿ ಕೌಶಲವನ್ನು ಹೆಚ್ಚಿಸಿಕೊಳ್ಳಲು, ಶಬ್ದ ಸಂಪತ್ತು, ಬರವಣಿಗೆಯ ಕೌಶಲ ವೃದ್ಧಿಸಿಕೊಳ್ಳಲು ಈ ಮುಂದೆ ನೀಡಿರುವ ಚಟುವಟಿಕೆಗಳನ್ನು ಬರೆಯಿರಿ.



**ಸೂಚನೆ:** ಈ ಚಿತ್ರವನ್ನು ಕುರಿತು ನಾಲ್ಕೈದು ವಾಕ್ಯಗಳಲ್ಲಿ ಬರೆಯಿರಿ. ಇದಕ್ಕೆ ಸೂಕ್ತವಾದ ಶೀರ್ಷಿಕೆ ನೀಡಿರಿ.

© KTBS NOT TO BE REPUBLISHED

2. ಈ ಸನ್ನಿವೇಶ ಏನನ್ನು ಹೇಳುತ್ತಿದೆ? ಅದನ್ನು ಬರೆಯಿರಿ.



@KTBS
NOT TO BE REPUBLISHED

3. ಕೆಳಗಿನ ಚಿತ್ರವನ್ನು ಕುರಿತು ನಿಮಗೆ ಅನಿಸಿದ್ದನ್ನು ಬರೆಯಿರಿ.



ಆಟವಾಡುವುದು ಎಂದರೆ ನನಗೆ ಇಷ್ಟ. ಏಕೆಂದರೆ:

@KTBS NOT TO BE REPUBLISHED

4. ಚಿತ್ರದಲ್ಲಿ ಕಾಣುವ ಪರಿಸರದ ಬಗ್ಗೆ ಬರೆಯಿರಿ.



@KTBS
NOT TO BE REPUBLISHED

5. ಶಿಕ್ಷಕಿಯವರು ಏನು ಮಾಡುತ್ತಿದ್ದಾರೆ? ಊಹಿಸಿ ಬರೆಯಿರಿ. (ಕನಿಷ್ಟ ಏಳೆಂಟು ವಾಕ್ಯಗಳಲ್ಲಿ)



@KTBS
NOT TO BE REPUBLISHED

# 13. ಪತ್ರಲೇಖನ

**ಈ ಮಾದರಿ ಪತ್ರವನ್ನು ಗಮನಿಸಿ ಪತ್ರವನ್ನು ಪೂರ್ಣಗೊಳಿಸಿ.**

ಅ. ಮಾದರಿ ವೈಯಕ್ತಿಕ ಪತ್ರ (ಕೌಟುಂಬಿಕ ಪತ್ರ) ಬರೆಯಿರಿ.

ಕ್ಷೇಮ, ಶ್ರೀ ಹೆಸರು__________

ಇಂದ, ಸ್ಥಳ __________

__________ ದಿನಾಂಕ __________

__________

__________

__________

__________ ರವರಿಗೆ, ನಿಮ್ಮ ಪ್ರೀತಿಯ __________ ಮಾಡುವ __________ ಇಲ್ಲಿ ನಾನು ಆರೋಗ್ಯವಾಗಿದ್ದೇನೆ. ಅಲ್ಲಿ ನಿಮ್ಮ ಕ್ಷೇಮ ಸಮಾಚಾರದ ಬಗ್ಗೆ ಪತ್ರ ಬರೆಯಿರಿ.

__________

__________

__________

__________

__________

__________

__________

ಮನೆಯಲ್ಲಿರುವ ಎಲ್ಲ ಹಿರಿಯರಿಗೆ ನನ್ನ ನಮಸ್ಕಾರಗಳನ್ನು ತಿಳಿಸಿ, ಕಿರಿಯರಿಗೆಲ್ಲಾ ನನ್ನ ಆಶೀರ್ವಾದಗಳು.

ವಂದನೆಗಳೊಂದಿಗೆ, ಇಂತಿ ನಿಮ್ಮ ಪ್ರೀತಿಯ

ಹೊರ ವಿಳಾಸ
ಇವರಿಗೆ,

__________

__________

__________

@KTBS NOT TO BE REPUBLISHED

ಆ. ಇದು ಮಾದರಿ ವ್ಯವಹಾರಿಕ ಪತ್ರ ಬರೆಯಿರಿ.

ಇಂದ,

______________________

______________________

______________________

ಇವರಿಗೆ,

______________________

______________________

______________________

ಮಾನ್ಯರೆ,

ವಿಷಯ:

______________________________________________________

______________________________________________________

______________________________________________________

______________________________________________________

______________________________________________________

______________________________________________________

______________________________________________________

______________________________________________________

ವಂದನೆಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ

ಸ್ಥಳ: ______________

ದಿನಾಂಕ: ______________

@KTBS
NOT TO BE REPUBLISHED

ಇ. ನಿಮ್ಮ ಊರಿನಲ್ಲಿರುವ ಬ್ಯಾಂಕಿನ ವ್ಯವಸ್ಥಾಪಕರಿಗೆ ನೀವು ಒಂದು ಉಳಿತಾಯ ಖಾತೆಯನ್ನು ತೆರೆಯಲು ಬೇಕಾದ ದಾಖಲೆಗಳನ್ನು ಕೇಳಿ ಒಂದು ಪತ್ರ ಬರೆಯಿರಿ.

@KTBS
NOT TO BE REPUBLISHED

# 14. ಭಾಷಾಂತರ

ಅ. ಕೆಳಗಿನ ಕಥಾ ಭಾಗವನ್ನು ಓದಿ. ಇದರ ಅರ್ಥ ವ್ಯತ್ಯಾಸವಾಗದಂತೆ ಕನ್ನಡಕ್ಕೆ ಭಾಷಾಂತರಿಸಿ ಬರೆಯಿರಿ.

**The Crazy Frogs**

Once upon a time some frogs who lived in a large pond wished very much to have a King to rule over them. But they could not decide which of them should be chosen. So they asked Sun, the Kings of the Gods, to send them a King. Sun God dropped a heavy log with a great splash into the pond and said to frogs "This is your King."

After some time, the frogs got used to the log which only floated there and did nothing else. So they asked the Sun God for a new King, one who would be more exciting.

This time the Sun God sent them a stork to rule over them and it was not long before the new King was moving about amongst his subjects, gobbling up as many as he could catch. The frogs fled in terror to the bottom of the pond. They asked the Sun God to take away their cruel King. But the Sun God refused to do so.

@KTBS
NOT TO BE REPUBLISHED

# 15. ಸಂಕ್ಷೇಪಿಸಿ

ಅ. ಕೆಳಗಿನ ಕೈಬರಹದಲ್ಲಿರುವ ಕಥಾ ಭಾಗವನ್ನು 50 ರಿಂದ 60 ಪದಗಳಲ್ಲಿ ಸಂಕ್ಷೇಪಿಸಿ ಬರೆಯಿರಿ.

ನಿಧಿಯ ರಹಸ್ಯ

ಒಂದು ಊರಿನಲ್ಲಿ ಸೋಮಪ್ಪ ಎಂಬ ರೈತನಿದ್ದನು. ಅವನಿಗೆ ನಾಲ್ಕು ಎಕರೆ ಜಮೀನು ಇತ್ತು. ಪ್ರತಿ ವರ್ಷ ಮಳೆಯನ್ನೇ ಆಶ್ರಯಿಸಿ ಬೇಸಾಯ ಮಾಡುತ್ತಾ ಜೀವನ ಸಾಗಿಸುತ್ತಿದ್ದರು. ಇವನಿಗೆ ರಾಮಪ್ಪ ಮತ್ತು ಭೀಮಪ್ಪ ಎಂಬ ಇಬ್ಬರು ಗಂಡು ಮಕ್ಕಳಿದ್ದರು. ಸೋಮಪ್ಪನ ಮಕ್ಕಳು ತುಂಬಾ ಸೋಮಾರಿಗಳಾಗಿದ್ದರು. ಶಾಲೆಗೂ ಸರಿಯಾಗಿ ಹೋಗುತ್ತಿರಲಿಲ್ಲ. ಜಮೀನಿನಲ್ಲಿ ಕೆಲಸ ಮಾಡಲು ಹೋಗುತ್ತಲೇ ಇರಲಿಲ್ಲ. ಇದರಿಂದ ಸೋಮಪ್ಪನಿಗೆ ತುಂಬಾ ಚಿಂತೆಯಾಗಿತ್ತು.

ಮಕ್ಕಳು ಕಷ್ಟಪಟ್ಟು ದುಡಿಯಲು ಅವರ ಮನಸ್ಸನ್ನು ಪರಿವರ್ತಿಸುವಂತೆ ಶಾಲೆಯ ಗುರುಗಳಿಗೆ ಸೋಮಪ್ಪ ಕೇಳಿಕೊಳ್ಳುತ್ತಿದ್ದನು. ರಾಮಪ್ಪ ಮತ್ತು ಭೀಮಪ್ಪನಿಗೆ ಗುರುಗಳು ಈ ವಿಚಾರವನ್ನು ಹೇಳಬೇಕೆನ್ನುವಷ್ಟರಲ್ಲಿ ಸೋಮಪ್ಪನು ಕೊನೆಯುಸಿರೆಳೆದನು.

ಕೆಲವು ದಿನಗಳ ನಂತರ ಗುರುಗಳು ರಾಮಪ್ಪ ಮತ್ತು ಭೀಮಪ್ಪನನ್ನು ಅವರ ಮನೆಗೆ ಕರೆಸಿ ಅವರ ತಂದೆಯ ಆಸೆಯನ್ನು ತಿಳಿಸಲು ಪ್ರಯತ್ನಿಸಿದರು. "ಅಯ್ಯೋ ಮಕ್ಕಳೇ, ನಿಮಗೆ ಜವಾಬ್ದಾರಿ ಎಂಬುದು ಇನ್ನೂ ಬಂದಿಲ್ಲ. ನೀವು ಕಷ್ಟಪಟ್ಟು ಬೇಸಾಯ ಮಾಡಬೇಕೆಂಬುದೇ ನಿಮ್ಮ ತಂದೆಯ ಆಸೆಯಾಗಿತ್ತು. ನಿಮಗಾಗಿ ನಿಮ್ಮ ತಂದೆ ಹೊಲದಲ್ಲಿ ಚಿನ್ನದ ನಾಣ್ಯಗಳನ್ನು ಭೂಮಿಯೊಳಗೆ ಇಟ್ಟಿದ್ದಾರೆ. ಅದನ್ನು ನೀವೇ ಹುಡುಕಿ ತೆಗೆದುಕೊಂಡು ಬನ್ನಿ" ಎಂದು ಕಿವಿಮಾತು ಹೇಳಿದರು.

ರಾಮಪ್ಪ ಮತ್ತು ಭೀಮಪ್ಪ ಗುರುಗಳ ಮಾತಿನಂತೆ ಹೊಲವನ್ನೆಲ್ಲಾ ಅಗೆದು ನಿಧಿಗಾಗಿ (ಚಿನ್ನದ ನಾಣ್ಯಗಳಿಗಾಗಿ) ಹುಡುಕಾಡಿದರು. ಇಡೀ ಹೊಲವನ್ನೆಲ್ಲಾ ಅಗೆದರೂ ನಿಧಿ ದೊರೆಯಲಿಲ್ಲ. ದಿನಗಳೆದಂತೆ ಚೆನ್ನಾಗಿ ಮಳೆಯಾಯ್ತು. ಗುರುಗಳು ಜೋಳವನ್ನು ಬಿತ್ತಲು ಹೇಳಿದರು. ಉತ್ಕೃಷ್ಟ ಬೆಳೆ ಬಂತು. ಮಾರುಕಟ್ಟೆಯಲ್ಲಿ ಮಾರಾಟ ಮಾಡಿದರು. ಕೈತುಂಬಾ ಹಣ ಬಂತು. ಗುರುಗಳು ರಾಮಪ್ಪ ಮತ್ತು ಭೀಮಪ್ಪನನ್ನು ಕರೆಸಿ "ಮಕ್ಕಳೇ, ಇದೇ ನಿಮ್ಮ ತಂದೆ ನಿಮಗಾಗಿ ಬಚ್ಚಿಟ್ಟಿದ್ದ ನಿಧಿ. ಹೀಗೆಯೇ ನಿಮ್ಮ ಶ್ರಮ ಮುಂದುವರೆಯಲಿ" ಎಂದು ಹರಸಿದರು. ಮಕ್ಕಳು ದುಡಿಮೆಯನ್ನೇ ಕಾಯಕವನ್ನಾಗಿಸಿಕೊಂಡರು. ಸುಖ ಜೀವನ ನಡೆಸಿದರು.

NOT TO BE REPUBLISHED ©KTBS

ಸಾರಾಂಶ:

ಆ. ಕೆಳಗಿನ ವೃತ್ತ ಪತ್ರಿಕೆಯಲ್ಲಿರುವ ಅಂಕಣವನ್ನು ಓದಿ ಇದರ ಸಾರಾಂಶವನ್ನು ಬರೆಯಿರಿ.

# ಮನೆ ಕನಸು ನನಸು



> ಬೆಂಗಳೂರಿನ ಐಟಿ ಕ್ಷೇತ್ರದ ಆದ್ಯತೆಯ ಪ್ರದೇಶ ಯಾವುದು ಎಂದು ಕೇಳಿದರೆ, ಅದಕ್ಕೆ ಉತ್ತರ ನಿಸ್ಸಂದೇಹವಾಗಿ ಬೆಂಗಳೂರು ದಕ್ಷಿಣ. ಉತ್ತಮ ಸಂಪರ್ಕ, ವಸತಿ ಪ್ರದೇಶಗಳು ಸಮೀಪದಲ್ಲಿರುವುದೇ ದಕ್ಷಿಣದ ಐಟಿ ಯಶೋಗಾಥೆಗೆ ಮುನ್ನುಡಿ ಬರೆದಿದೆ.

ಬೆಂಗಳೂರು ದಕ್ಷಿಣ ಭಾಗವು ಐಟಿ ವಲಯದ ಅಚ್ಚುಮೆಚ್ಚಿನ ಸ್ಥಳವಾಗಿ ಮಾರ್ಪಟ್ಟಿದೆ. ವಾಣಿಜ್ಯ ಮತ್ತು ಕಚೇರಿಯ ಕೇಂದ್ರ ಸ್ಥಾನವಾಗಿ ಇದು ಮಾರ್ಪಟ್ಟಿದ್ದು, ನಿರಂತರವಾಗಿ ಉದ್ಯಮಿಗಳನ್ನು ಆಕರ್ಷಿಸುತ್ತಲೇ ಸಾಗಿದೆ. ಹೊಸೂರು ರಸ್ತೆ ಎಕ್ಸ್‌ಪ್ರೆಸ್‌ವೇ, ಹೊರ ವರ್ತುಲ ರಸ್ತೆ ಮತ್ತು ಮುಂಬರುವ ಮೆಟ್ರೊ ಸಂಪರ್ಕ ಹಾಗೂ ರಸ್ತೆಗಳ ಅಗಲೀಕರಣ ಯೋಜನೆಯ ಪ್ರಸ್ತಾಪದಿಂದ ದಕ್ಷಿಣ ಭಾಗದ ಪ್ರಗತಿ ಸುತ್ತಮುತ್ತಲಿನ ಪ್ರದೇಶಗಳಿಗೂ ವಿಸ್ತರಣೆಯಾಗುತ್ತಲೇ ಸಾಗಿದೆ.

ದಕ್ಷಿಣ ಭಾಗದ ಯಶೋಗಾಥೆಯನ್ನು ನೈಟ್ ಫ್ರಾಂಕ್ ಇಂಡಿಯಾದ ನಿರ್ದೇಶಕ ಸತೀಶ್ ಬಿ. ಎನ್. ಹೀಗೆ ವಿವರಿಸುತ್ತಾರೆ. 'ಸದ್ಯದ ಮಟ್ಟಿಗೆ ಕೋರಮಂಗಲ, ಬನ್ನೇರುಘಟ್ಟ ರಸ್ತೆ ಮತ್ತು ಇಲೆಕ್ಟ್ರಾನಿಕ್ ಸಿಟಿ ಪ್ರದೇಶಗಳಲ್ಲಿ ಕಚೇರಿ ಕಟ್ಟಡಗಳು ಸಾಕಷ್ಟಿವೆ. ಈಗ ಸರ್ಜಾಪುರ ಮತ್ತು ಸರ್ಜಾಪುರ -ಹೊರ ವರ್ತುಲ ರಸ್ತೆಯತ್ತಲೂ ನಗರ ಬೆಳೆಯುತ್ತಿದೆ. ಇಲೆಕ್ಟ್ರಾನಿಕ್ ಸಿಟಿ ಐಟಿ ಮತ್ತು ಐಟಿಇಎಸ್ ಪ್ರಮುಖ ಕೇಂದ್ರವಾಗಿದ್ದರೆ, ಇತರ ಕಿರು ಮಾರುಕಟ್ಟೆಗಳಾದ ಕೋರಮಂಗಲ ಮತ್ತು ಬನ್ನೇರುಘಟ್ಟ ರಸ್ತೆಗಳು ಕೂಡ ಹಲವಾರು ಕಚೇರಿ ಕಟ್ಟಡ ಪ್ರಾಜೆಕ್ಟ್‌ಗಳಿಗೆ ಸಾಕ್ಷಿಯಾಗಿದೆ. ಹೊಸೂರು ರಸ್ತೆ ಎಲಿವೇಟೆಡ್ ಹೈವೇನಿಂದಾಗಿ ಇಲೆಕ್ಟ್ರಾನಿಕ್ ಸಿಟಿಗೆ ಪ್ರಯಾಣ ಸುಲಭವಾಗಿರುವುದು ಈ ಪ್ರಗತಿಗೆ ಕಾರಣ' ಎಂದು ಸತೀಶ್ ವಿವರಿಸಿದರು.

ಜೆಎಲ್‌ಎಲ್ ಇಂಡಿಯಾದ ಅಧ್ಯಯನದ ಪ್ರಕಾರ ಇಲ್ಲಿ ಆರಂಭವಾಗಿರುವ ಬಹುತೇಕ ಪ್ರಾಜೆಕ್ಟ್‌ಗಳು ಐಟಿ ಮತ್ತು ಐಟಿಯೇತರ ಕಚೇರಿ ಕಟ್ಟಡಗಳಾಗಿವೆ. ಐಟಿ ಮತ್ತು ಐಟಿಇಎಸ್‌ಗಳು ಇಲ್ಲಿ ಹೆಚ್ಚುವರಿ ಕಟ್ಟಡಗಳನ್ನು ಪಡೆದುಕೊಳ್ಳುವ ಲಕ್ಷಣಗಳು ಕಂಡು ಬರುತ್ತಿವೆ. ವಸತಿ ಪ್ರದೇಶಗಳಿಗೆ ಇದು ಸಮೀಪವಿರುವುದೇ ಇದಕ್ಕೆ ಕಾರಣ ಎಂದು ಜೆಎಲ್‌ಎಲ್ ವರದಿ ಹೇಳಿದೆ.

'ಹೊಸೂರು ರಸ್ತೆ ಮತ್ತು ಸರ್ಜಾಪುರ ರಸ್ತೆ ಪ್ರದೇಶಗಳು ವಸತಿ ಪ್ರದೇಶಗಳಿಗೆ ಸಮೀಪವಿದ್ದು, ಇಲ್ಲಿ ವಾಣಿಜ್ಯ ಚಟುವಟಿಕೆ ಹೆಚ್ಚು ಕಂಡು ಬರುತ್ತಿದೆ. ಸರ್ಜಾಪುರ ರಸ್ತೆ ನಗರದಲ್ಲಿ ಅತಿ ವೇಗದಲ್ಲಿ ಬೆಳೆಯುತ್ತಿರುವ ಪ್ರದೇಶಗಳ ಪೈಕಿ ಒಂದಾಗಿದ್ದು, ಇಲ್ಲಿಯೂ ಐಟಿ ಮತ್ತು ಐಟಿಇಎಸ್ ವಲಯದಿಂದಲೇ ಇಲ್ಲಿ ಕಚೇರಿ ಕಟ್ಟಡಕ್ಕೆ ಹೆಚ್ಚು ಬೇಡಿಕೆ ಇದೆ. ಇದರಿಂದಾಗಿ ಸರ್ಜಾಪುರ ರಸ್ತೆಯು ಮಧ್ಯಮ ಆದಾಯ ವರ್ಗದ ವಸತಿ ಪ್ರಾಜೆಕ್ಟ್‌ಗಳಿಗೆ ಹೆಚ್ಚು ಆಕರ್ಷಣೀಯವಾಗಿದ್ದು, ಹೊರ ವರ್ತುಲ ರಸ್ತೆಯಲ್ಲಿರುವ ಐಟಿ ಮತ್ತು ಐಟಿಇಎಸ್ ಕಂಪನಿಯ ಉದ್ಯೋಗಿಗಳೇ ಇದರ ಬಹುದೊಡ್ಡ ಗ್ರಾಹಕರಾಗಿದ್ದಾರೆ' ಎಂದು ಜೆಎಲ್‌ಎಲ್ ಇಂಡಿಯಾದ ಶ್ರೀನಿವಾಸ ರೆಡ್ಡಿ ವಿವರಿಸಿದರು.

'ಮುಂದಿನ ದಿನಗಳಲ್ಲಿ ಸರ್ಜಾಪುರ-ಹೊರ ವರ್ತುಲ ರಸ್ತೆ ಪ್ರದೇಶ ಕಚೇರಿ ಕಟ್ಟಡದ ಆದ್ಯತೆಯ ಸ್ಥಳವಾಗುವುದರಲ್ಲಿ ಸಂಶಯವಿಲ್ಲ. ಇನ್ನು ಸಿಗ್ನಲ್ ಫ್ರೀ ಕಾರಿಡಾರ್ ನಿರ್ಮಾಣಕ್ಕೆ ಕೈಗೊಂಡಿರುವ ಕ್ರಮಗಳಿಂದ ಮುಂದಿನ ದಿನಗಳಲ್ಲಿ ಈ ಪ್ರದೇಶಕ್ಕೆ ಮತ್ತಷ್ಟು ಮಹತ್ವ ಬರಲಿದೆ. ಉತ್ತಮ ಮೂಲಸೌಕರ್ಯ ಮತ್ತು ವಸತಿ ಪ್ರದೇಶಗಳಿಗೆ ಸಮೀಪವಿರುವುದು ಇದಕ್ಕೆ ಲಾಭದಾಯಕವಾಗಿ ಪರಿಣಮಿಸಿದೆ. ಸದ್ಯದ ಮಟ್ಟಿಗೆ ಇಲ್ಲಿ 39 ದಶಲಕ್ಷ ಚದರ ಅಡಿ ಕಚೇರಿ ಸ್ಥಳಾವಕಾಶವಿದೆ. ಮುಂದಿನ ದಿನಗಳಲ್ಲಿ ಅಂದರೆ 2017ರೊಳಗೆ 14.60 ದಶಲಕ್ಷ ಚದರ ಅಡಿ ಲಭ್ಯವಾಗಲಿದೆ' ಎಂದು ಸತೀಶ್ ಹೇಳಿದರು. ಇಲೆಕ್ಟ್ರಾನಿಕ್ ಸಿಟಿಯಲ್ಲಿ ಪ್ರಮುಖವಾಗಿ ಐಟಿ ಮತ್ತು ಐಟಿಇಎಸ್ ಕಂಪನಿಗಳೇ ಕಚೇರಿ ಹೊಂದಿದ್ದರೆ, ಉಳಿದಂತೆ ಬಯೋಟೆಕ್ನಾಲಜಿ, ಫರ್ಮಾಸ್ಯುಟಿಕಲ್ಸ್, ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ ಮತ್ತು ಅಲೈಡ್ ಮ್ಯಾನುಫ್ಯಾಕ್ಚರಿಂಗ್ ವಲಯಗಳು ಕೂಡ ಕಚೇರಿ ಹೊಂದಿವೆ.

© KTBS NOT TO BE REPUBLISHED

**ಸಾರಾಂಶ:**

ಇ. ಈ ದಿನದ ವೃತ್ತ ಪತ್ರಿಕೆಯಲ್ಲಿರುವ ಕ್ರೀಡಾ ಪುಟದಲ್ಲಿರುವ ಯಾವುದಾದರೂ ಅಂಕಣವನ್ನು ಓದಿ ಅದರ ಸಾರಾಂಶವನ್ನು ಬರೆಯಿರಿ.

| ಸಾರಾಂಶ: |
| --- |
| |

@KTBS NOT TO BE REPUBLISHED

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
| --- | --- | --- | --- | --- |
| 1. | ಸ್ವಂತವಾಗಿ ಪತ್ರಗಳನ್ನು ವ್ಯಾಕರಣ ದೋಷವಿಲ್ಲದೇ ಬರೆಯುವೆ. | | | |
| 2. | ದಿನ ಪತ್ರಿಕೆ/ ಕೈಬರಹ ಪ್ರತಿಗಳನ್ನು ಓದಿ ಅರ್ಥೈಸುವೆ | | | |
| 3. | ಅಲಂಕಾರ,ಛಂದಸ್ಸು, ಇತ್ಯಾದಿ ವ್ಯಾಕರಣ ರಚನೆಗಳನ್ನು ಅರ್ಥೈಸುವೆ | | | |

**ಶಿಕ್ಷಕರ ಅಭಿಪ್ರಾಯ:**

| ಅತ್ಯುತ್ತಮ | | ಉತ್ತಮ | | ಸಾಧಾರಣ | |
| --- | --- | --- | --- | --- | --- |

# 16. ಕಿರುಪರೀಕ್ಷೆ – 3

**I. ಬಿಟ್ಟ ಸ್ಥಳವನ್ನು ಸೂಕ್ತ ಪದದಿಂದ ತುಂಬಿರಿ.**

1. ಶಬ್ದ ಅಥವಾ ಅರ್ಥದಿಂದ ಕಾವ್ಯದ ಸೌಂದರ್ಯವನ್ನು ಹೆಚ್ಚಿಸಿದರೆ ಅದನ್ನು__________ ಎನ್ನುವರು.
2. ಎರಡು ವಸ್ತುಗಳಲ್ಲಿ ಇರುವ ಪರಸ್ಪರ ಸಾದೃಶ್ಯವನ್ನೂ ತಿಳಿಸುವ ಅಲಂಕಾರ__________ .
3. ಉಪಮೇಯವು ಉಪಮಾನದಂತಿದೆ ಎಂದು ಹೇಳದೆ,. ಎರಡೂ ಒಂದೇ ಎಂದು ತಿಳಿಸುವುದು __________ ಅಲಂಕಾರ.
4. ವರ್ಣ್ಯ, ಅವರ್ಣ್ಯಗಳಿಗೆ ಬಿಂಬ ಪ್ರತಿಬಿಂಬ ಭಾವವು ವ್ಯಕ್ತವಾಗುತ್ತಿದ್ದರೆ __________ .
5. ಅಲಂಕಾರದಲ್ಲಿ ಮುಖ್ಯವಾಗಿ __________ ಪ್ರಕಾರಗಳು.

**II. ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಉಪಮಾಲಂಕಾರದಲ್ಲಿ ಹೋಲಿಕೆಗೆ ಒಳಗಾಗುವ ವಸ್ತು / ವಿಷಯವನ್ನು ಹೀಗೆ ಕರೆಯುತ್ತಾರೆ __________

   (a) ಉಪಮಾನ (b) ಉಪಮೇಯ

   (c) ಉಪಮಾ ವಾಚಕ (d) ಸಮಾನಧರ್ಮ

2. ಸುಶೀಲಳ ಮುಖವು ಕಮಲದಂತೆ ಸುಂದರವಾಗಿದೆ ಎನ್ನುವಲ್ಲಿ ಇರುವ ಸಮಾನ ಧರ್ಮ __________ .

   (a) ಕಮಲ (b) ಸುಶೀಲ (c) ಮುಖ (d) ಸುಂದರ

3. 'ಮುಖಚಂದ್ರ' ಎನ್ನುವುದು ಈ ಅಲಂಕಾರಕ್ಕೆ ಉದಾಹರಣೆ __________ .

   (a) ರೂಪಕ (b) ಉಪಮಾ (c) ದೃಷ್ಟಾಂತ (d) ಅರ್ಥಾಂತರ ನ್ಯಾಸ

4. "ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ ರುಚಿಯಿಲ್ಲ".

   ಈ ವಾಕ್ಯವು __________ ಅಲಂಕಾರದ ಉದಾಹರಣೆಯಾಗಿದೆ.

   (a) ಉಪಮಾ (b) ರೂಪಕ (c) ದೃಷ್ಟಾಂತ (d) ಯಮಕ

5. ದೇವಮಂದಿರವನ್ನು ಭಕ್ತರು ಅಲಂಕರಿಸುವಂತೆ ಈ ಉಪಮಾಲಂಕಾರದಲ್ಲಿ ಲುಪ್ತವಾಗಿರುವ ಅಂಶ__________

   (a) ಉಪಮೇಯ (b) ಉಪಮಾನ (c) ಉಪಮಾವಾಚಕ (d) ಸಮಾನಧರ್ಮ

@KTBS NOT TO BE REPUBLISHED

**III. ಹೊಂದಿಸಿ ಬರೆಯಿರಿ.**

| (ಎ) | | (ಬಿ) | | ಉತ್ತರಗಳು |
|---|---|---|---|---|
| (ಎ) | ಕಮಲಳ ಹಲ್ಲುಗಳು | (1) | ಹೆಣ ಶೃಂಗಾರ ಅರಿಯದು | |
| (ಬಿ) | ಮಗುವಿನ ಮುಖ | (2) | ರೂಪಕಾಲಂಕಾರ | |
| (ಸಿ) | ಊರು ಉಪಕಾರ ಅರಿಯದು | (3) | ದಾಳಿಂಬೆಯ ಬೀಜಗಳು | |
| (ಡಿ) | ಉಪಮೇಯ | (4) | ಚಂದ್ರ | |
| (ಇ) | ಮನೆಯೇ ಧರ್ಮಾಶ್ರಮ | (5) | ವರ್ಣ್ಯ | |

**IV. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

1. ಅಲಂಕಾರ ಎಂದರೇನು?

_______________________________________________ .

2. ಉಪಮಾಲಂಕಾರ ಎಂದರೇನು?

_______________________________________________ .

3. ರೂಪಕಾಲಂಕಾರ ಎಂದರೇನು?

_______________________________________________ .

**V. ಕೆಳಗಿನ ವಾಕ್ಯಗಳಲ್ಲಿರುವ ಅಲಂಕಾರವನ್ನು ಹೆಸರಿಸಿ.**

1. ಸಮುದ್ರದ ನೀರು ಆಕಾಶದ ನೀಲಿಯಂತಿದೆ.

ಅಲಂಕಾರ: _______________________________________ .

2. ಮನೆಯೇ ಧರ್ಮಾಶ್ರಮ, ಮನೆವಾಳ್ತೆಯೇ ಧರ್ಮ.

ಅಲಂಕಾರ: _______________________________________ .

3. ಬಲ್ಲವರ ಒಡನಾಟ ಬೆಲ್ಲವನು ಮೆದ್ದಂತೆ.

ಅಲಂಕಾರ: _______________________________________ .

| ಶಿಕ್ಷಕರ ಅಭಿಪ್ರಾಯ: | | | | | |
|---|---|---|---|---|---|
| ಅತ್ಯುತ್ತಮ | | ಉತ್ತಮ | | ಸಾಧಾರಣ | |

@KTBS NOT TO BE REPUBLISHED

NOTE

@KTBS
NOT TO BE REPUBLISHED